ಮೈ ಒದ್ದೆಯಾಗಿಸಿಕೊಂಡು ಮನಸು ಚಿಗುರಿಸಿಕೊಳ್ಳುವ ಮಳೆಗಾಲ, ರಮಣೀಯ ತಾಣಗಳೆಲ್ಲ ಪ್ರವಾಸಿಗರಿಂದ ತುಂಬಿ ತುಳುಕುವ ಸಮಯ. ರಸ್ತೆ ಬದಿಯ ಬಿಸಿ ಬಿಸಿ ಮುಸುಕಿನ ಜೋಳ ಹಾಗೂ ಕ್ರಿಸ್ಪಿ ಪಕೋಡದ ಹೊಗೆ ಬಗೆಬಗೆಯ ವಿನ್ಯಾಸದಿಂದ ಆಕಾಶ ಮುಟ್ಟುತ್ತದೆ. ಜಲಧಾರೆಗಳ ಬುಡದಲ್ಲಿ ಭೋರ್ಗರೆತವನ್ನೂ ಮೀರಿಸುವ ಹರ್ಷೋದ್ಗಾರಗಳು ಮೊಳಗುತ್ತವೆ. ಮಳೆಗಾಲ ಪ್ರವಾಸೋದ್ಯಮದ ಸುಗ್ಗಿ ಕಾಲ. ಆದರೆ ಈ ವರ್ಷದ ಪ್ರವಾಸ ಸುಗ್ಗಿಗೆ ಕೊರೊನಾ ಬರೆ ಬಿದ್ದಿದೆ. ಪ್ರವಾಸೋದ್ಯಮವನ್ನೇ ನಂಬಿಕೊಂಡಿದ್ದ ಸಾವಿರಾರು ಜನರ ಬದುಕಿನಲ್ಲಿ ಬರದ ನೆರಳು. ಪ್ರಸ್ತುತ ಕೊರೊನಾ ಬಿಕ್ಕಟ್ಟಿನೊಂದಿಗೆ ಜನ ಹೊಂದಿಕೊಳ್ಳಲು ಶುರು ಮಾಡಿರುವಂತೆ, ಪ್ರವಾಸಿ ಸ್ಥಳಗಳಲ್ಲಿ ಸ್ವಲ್ಪ ಮಟ್ಟಿಗಿನ ಜೀವಂತಿಕೆ ಕಾಣಿಸುತ್ತಿದೆ. ಕಳೆದ ಆರೇಳು ತಿಂಗಳ ಗೃಹಬಂಧನದಿಂದ ಉಂಟಾದ ಕ್ಲೇಶಕ್ಕೆ ಪ್ರವಾಸ ಮದ್ದಾಗಬಲ್ಲದು. ಕರ್ನಾಟಕದ ಪ್ರವಾಸಿತಾಣಗಳಲ್ಲಿ ಮೆಲ್ಲಮೆಲ್ಲನೇ ಹೆಚ್ಚುತ್ತಿರುವ ಮಾಸ್ಕ್‌ಧಾರಿ ಪ್ರವಾಸಿಗರ ಸಂಖ್ಯೆಯೇ ಇದಕ್ಕೆ ಪುರಾವೆ. ರಾಜ್ಯದ ಪ್ರಸಿದ್ಧ ಪ್ರವಾಸಿತಾಣಗಳಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುವ ಈ ಪ್ರಯತ್ನ ಪ್ರವಾಸಪ್ರಿಯರಿಗೆ ಕೈಪಿಡಿಯೂ ಆಗಬಲ್ಲದು.

■ **ಪದ್ಮನಾಭ ಭಟ್**


**ಪೂರಕ ಮಾಹಿತಿ:**

**ಬಿ.ಜೆ. ಧನ್ಯಪ್ರಸಾದ್ | ಸದಾಶಿವ ಎಂ.ಎಸ್. | ಕೋಡಿಬೆಟ್ಟು ರಾಜಲಕ್ಷ್ಮಿ | ಓಂಕಾರಮೂರ್ತಿ | ಆದಿತ್ಯ ಕೆ.ಎ.**
**ಶಶಿಕಾಂತ ಎಸ್. ಶೆಂಬೆಳ್ಳಿ | ವಿ. ಸಂತೋಷ್‌ಕುಮಾರ್ ಕಾರ್ಗಲ್**




ಚಿಕ್ಕಮಗಳೂರಿನ ಗಿರಿಶ್ರೇಣಿಯಲ್ಲಿ ಪ್ರವಾಸಿಗರ ಉಲ್ಲಾಸ–ಉತ್ಸಾಹ.